ಅವರಿಗೆ ಉತ್ತರಿಸುವುದು ಹೇಗೆ ಎಂಬ ಆತಂಕದಲ್ಲೆ ಹಿಂದಿನಿಂದ ಬರುತ್ತಿದ್ದ ಪ್ರತಿ ಬೈಕ್ ಸೌಂಡ್‌ನೂ ಗಮನಿಸುತ್ತಿದ್ದ.

ಹೆಂಡ್ತಿ ಬಿಟ್ಟ ಮೂರು ತಿಂಗಳ ನಂತರ ಮಾವನ ಮನೆಗೆ ಹೋಗುತ್ತಿರುವುದರಿಂದ ಅವರು ಹೇಗೆ ಕಾಣಬಹುದು, ಹೆಂಡತಿ ಮಾಲತಿ ನನ್ಮೇಲೆ ಏನೇನು ಹೇಳವ್ಳೊ, ಅವರಿಗೆ ಮುಖ ತೋರಿಸುವುದು ಹೇಗೆ? ಅಕಸ್ಮಾತ್ ಅವರೇನಾದರೂ ತಿರುಗಿ ಬಿದ್ದರೆ ನನ್ನ ಪ್ರತಿಕ್ರಿಯೆ ಹೇಗಿರಬೇಕು? ಇತ್ಯಾದಿ ಗೊಂದಲಗಳನ್ನು ಕಾಲಿಗೆ ತೊಡರಿಸಿಕೊಂಡೆ ಹೆಜ್ಜೆ ಹಾಕಿದ. ಊರ ಮೊದಲ ಮನೆ ಸಿಕ್ಕೇ ಬಿಟ್ಟಿತು. ಒಂದೆರಡು ಬೀದಿ ಬಳಸಿದರೆ ಸಾಕು ಹೆಂಚಿನ ಮನೆ ಮುಂದೆ ಹೋರಿ ಕಟ್ಟಿಕೊಂಡಿರುವ ಮಾವನ ಮನೆ ಎದುರಾಗೆ ಬಿಡುತ್ತದೆ. ಮನೆ ಮುಂದಿನ ಸುಂಚಿನ ಮುಂದೆ ರಾಗಿ ಕೇರುತ್ತ ಕುಳಿತಿರುವುದು ಅತ್ತೆ ಎಂಬುದು ದೂರದಿಂದಲೇ ಪತ್ತೆಯಾಯಿತು. ಕಳೆದ ಬಾರಿ ಕಾರಬ್ಬಕ್ಕೆ ಬಂದಿದ್ದಾಗ ಇನ್ನೂ ಮದುವೆ ಚಪ್ಪರವನ್ನು ಕಿತ್ತಿರಲಿಲ್ಲ. ಈಗ ಅದು ಇಲ್ಲವಾಗಿ ಮಾಮೂಲಿ ಆರು ಬಗ್ಗಿಸಿರುವ ಸುಂಚು ಮಾತ್ರ ಇತ್ತು. ಮದುವೆಗೆಂದು ಬಳಿದಿದ್ದ ಬಣ್ಣವೂ ತನ್ನ ರಜಸ್ಸನ್ನು ಕಳೆದುಕೊಂಡು ಮಂಕಾಗುತ್ತಿತ್ತು. ತರಾವರಿ ಯೋಚನೆಗಳ ನಡುವೆ ಅಳಿಯನ ಪಾದಗಳು ಬಂದು ಮನೆ ಮುಂದೆ ನಿಂತವು. ತಡವರಿಸಿ ಅಳಿಯನೆಂಬುದನ್ನು ಪತ್ತೆ ಹಚ್ಚಿಕೊಂಡ ಅತ್ತೆಗೆ ಶಾಕ್ ಆದಂತಾಗಿ ಕೇರುತ್ತಿದ್ದ ರಾಗಿಯನ್ನು ಬಿಟ್ಟು ಸೀರೆಯನ್ನು ಸರಿಮಾಡಿಕೊಂಡು ಮೇಲೆದ್ದು 'ಬಾರ್ ಪಾಪ, ಈಗ ಬಂದ' ಎಂದು ಉತ್ಸಾಹಗೊಂಡವಳಂತೆ ಒಳಹೋಗುತ್ತ ಅಳಿಯನನ್ನು ಬರಮಾಡಿಕೊಂಡಳು. ಕೆಂಪಣ್ಣ ಬಾಗಿಲಲ್ಲಿ ನಿಂತಾಗ ಯಾರೊ ಪಡಸಾಲೆಯಲ್ಲಿ ಕೂತು ಟಿವಿ ನೋಡುತ್ತಿದ್ದವರು ಆಗಷ್ಟೆ ಒಳ ಹೋದ ಸುಳಿವು ಸಿಕ್ಕಿತು. ಕೆಂಪಣ್ಣ ಒಳ ಪ್ರವೇಶಿಸಿದಾಗ ಕೇವಲ ಟಿವಿ ಮಾತ್ರ ಆಡುತ್ತಲಿದ್ದು ಒಳ ಹೋದದ್ದು ತನ್ನ ಹೆಂಡತಿಯೇ ಎಂಬುದು ಖಾತ್ರಿಯಾಯಿತು.

ಸೋಫಾ ಮೇಲೆ ಕೂತಿದ್ದ ಅಳಿಯನಿಗೆ ನೀರು ಕೊಡುವಂತೆ ಅತ್ತೆ ಮಾಲತಿಗೆ ಕೂಗಿ ಹೇಳಿದಳು. ಮಗಳು ನೀರು ತರುವುದು ತಡವಾದದ್ದರಿಂದ ಅತ್ತೆ ಆ ಸಮಯದಲ್ಲಿ 'ಊರಲ್ಲಿ ಎಲ್ಲ ಹೆಂಗಿದ್ರಪ್ಪ, ಅಪ್ಪ ಅಮ್ಮ ಚನಾಗಿದ್ರ' ಇತ್ಯಾದಿ ವಿಚಾರಿಸುತ್ತಿದ್ದಳು. ಮಾಲತಿ ಮೈಮೇಲೊಂದು ವೇಲ್ ಹೊದ್ದುಕೊಂಡು ನೀರು ತಂದು ಗಂಡನ ಕೈಗೆ ಕೊಟ್ಟಳು. ಕೆಂಪ ಹೆಂಡತಿಯ ಕಣ್ತುಂಬಿಕೊಂಡು ಹುಸಿನಗು ಸೂಸಿದ. ಹಳ್ಳಿ ಸೇರಿದ್ದ ಹೆಂಡತಿ ಒಂಚೂರು ಸೊರಗಿದಂತಿದ್ದಳು. ಅತ್ತೆ 'ದೂರದಿಂದ ಪ್ರಯಾಣ ಮಾಡಿ ಬಂದಿದೀಯ ಮೈತೊಕ ಹೋಗಪ್ಪ, ನೀರು ಕಾದವೆ' ಎಂದಳು. ಕೆಂಪನಿಗೂ ಅದೆ ಸರಿ ಎನಿಸಿ ಬಟ್ಟೆ ಕಳಚಾಕಲು ರೂಮೊಳಗೆ ಹೋದ. ಅಷ್ಟೊತ್ತು ಅಲ್ಲೆ ಇದ್ದ ಮಾಲತಿ ರೂಮಿಂದ ಆಚೆ ಬಂದಳು. ಮಂಚದ ಮೇಲಿದ್ದ ಲುಂಗಿ ಸುತ್ತಿಕೊಂಡು ಹೆಂಡತಿ ಕೊಟ್ಟ ಕಾಫಿಯನ್ನು ಹೀರಿ ಹೆಗಲ ಮೇಲೆ ಟವಲ್ ಹಾಕಿಕೊಂಡು ಸೀದ ಬಚ್ಚಲು ಹೊಕ್ಕ. ತಲೆ ಮೇಲೆ ಒಂದೆರಡು ತಂಬಿಗೆ ನೀರು ಬಿದ್ದ ತಕ್ಷಣ 'ಅಯ್ಯೊ ನಾನ್ಯಾಕೆ ಇವತ್ತು ಅತ್ತೆ ಅಂದ ತಕ್ಷಣ ಬಂದು ಸ್ನಾನಕ್ಕೆ ಕೂತೆ' ಎಂದು ದಿಗಿಲಾಗತೊಡಗಿತು. ಸ್ನಾನಕ್ಕೆ ಸಂಬಂಧ ಪಟ್ಟ ಸಂಗತಿಯಿಂದಲೇ ಅಲ್ವ ನನಗೆ ಈ ಸ್ಥಿತಿ ಬಂದಿರೋದು, ಇವತ್ತು ಮತ್ತೆ ಅದೇ ಪ್ರಪಾತಕ್ಕೆ ಬಿದ್ದೆನಲ್ಲ ಎನಿಸತೊಡಗಿತು. ಇದಕ್ಕೆ ಪೂರಕವಾಗಿ ನೀರೊಲೆ ಪಕ್ಕದಲ್ಲೆ ಬಿದ್ದಿದ್ದ ಉಜ್ಜಲ್ಲೊಂದು ಪದೆ ಪದೆ ಕೆಂಪನಿಗೆ ಮಂದಗೆ ಕಾಣಿಸುತಲಿದ್ದು ಕೆಣಕಿದಂತಾಗುತ್ತಿತ್ತು. 'ಲೆ ಮಾಲು ನಾನು ದನಿನ ಮಂತಕೆ ಹೋಗಿ ಬತ್ತಿನಿ, ಅಳಿಯಂದ್ರುದ ಅದೇನ್ ನೋಡು' ಎಂದು ಅತ್ತೆ ಹೇಳಿ ಹೋದುದು ಕೇಳಿಸಿತು. ಆನಂತರ ಕೆಂಪನ ಮೈಮೇಲಿಂದ ನೀರು ಧುಮ್ಮಿಕ್ಕುವ ಶಬ್ದ ಬಿಟ್ಟರೆ ಇನ್ನೊಂದು ಆ ಮನೆಯಲ್ಲಿ ಇದ್ದಂತಿರಲಿಲ್ಲ. ರಭಸಕ್ಕೆ ನಾಚಿದ ಕೆಂಪ ತಾನೂ ಮೆಲ್ಲಗೆ ನೀರು ಉಯ್ದುಕೊಳ್ಳತೊಡಗಿದ. ಅತ್ತ ಹದಿನೈದು ನಿಮಿಷಕ್ಕೆ ಬಚ್ಚಲು ಮನೆಯ ಡೋರ್ ಅನ್ನು ಯಾರೊ ಮೆಲ್ಲಗೆ ಬಡಿದಂತಾಯಿತು. ಅತ್ತ ಕಿವಿ ಮಡಗಲಾಗಿ ಮತ್ತೆ ನಿಶ್ಯಬ್ದ ಆವರಿಸಿತು. ಭ್ರಮೆ ಎನಿಸಿ ಮೈಯುಜ್ಜಿಕೊಳ್ಳತೊಡಗಿದ. ಈಗ ಹಿಂದಿಗಿಂತ ಇನ್ನೊಂದಷ್ಟು ದೀರ್ಘವಾಗಿ ಶಬ್ದ ಕೇಳಿಸಿತು. ಕೆಂಪ ಯಾರು ಅನ್ನಲು, ಅತ್ತಕಡೆಯ ದನಿ 'ತಗಿ ಮಾಮ ನಾನು ಮಾಲ್ತಿ, ಬೆನ್ನುಜ್ತಿನಿ' ಎಂದಿತು.

●